4.	ವನಪಾಲಕರು	22	ಅನುಕಂಪದ ನೇಮಕಾತಿ
5.	ಅರಣ್ಯ ರಕ್ಷಕರು	60	
6.	ಪ್ರಥಮ ದರ್ಜೆ ಸಹಾಯಕರು	10	
7.	ದ್ವಿತೀಯ ದರ್ಜೆ ಸಹಾಯಕರು	3	
8.	ವಾಹನ ಚಾಲಕರು	2	
9.	ಅರಣ್ಯ ವೀಕ್ಷಕರು	24	
10.	ಗ್ರೂಪ್ - ಡಿ	64	

ಆ)

	ನೇಮಕಾತಿಗಳ ವಿವರ	2001	2002	2003
1.	ವಲಯ ಅರಣ್ಯಾಧಿಕಾರಿ	-	-	03
2.	ಶೀಘ್ರಲಿಪಿಗಾರರು	-	05	-
3.	ಬೆರಳಚ್ಚುಗಾರರು	02	-	01
4.	ವನಪಾಲಕರು	20	02	-
5.	ಅರಣ್ಯ ರಕ್ಷಕರು	45	15	-
6.	ಪ್ರಥಮ ದರ್ಜೆ ಸಹಾಯಕರು	03	06	01
7.	ದ್ವಿತೀಯ ದರ್ಜೆ ಸಹಾಯಕರು	02	-	01
8.	ವಾಹನ ಚಾಲಕರು	-	02	-
9.	ಅರಣ್ಯ ವೀಕ್ಷಕರು	16	05	03
10.	ಗ್ರೂಪ್ - ಡಿ	24	13	27
	ಒಟ್ಟು	112	48	36

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ರಸ್ತೆ ಡಾಂಬರೀಕರಣ

96 (163) ಶ್ರೀ ಶಿವಶಂಕರ ರೆಡ್ಡಿ (ಗೌರಿಬಿದನೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ರಾಜ್ಯ ಹೆದ್ದಾರಿ ಬೆಂಗಳೂರು-ಹಿಂದೂಪುರ-ಚಿಕ್ಕಬಳ್ಳಾಪುರ-ಮೂಡಿಗೆರೆಯ 19 ಕಿ.ಮೀ. ರಸ್ತೆ ಡಾಂಬರು ಆಗದೇ ಸಂಚಾರಕ್ಕೆ ಅನಾನುಕೂಲ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಯಾವಾಗ ಡಾಂಬರೀಕರಣಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡಲಾಗುವುದು; ಇದಕ್ಕೆ ಬೇಕಾಗುವ ಅನುದಾನ ಎಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರು-ಹಿಂದೂಪುರ ರಸ್ತೆಯು ರಾಜ್ಯ ಹೆದ್ದಾರಿ ಎಸ್.ಹೆಚ್. 9 ಆಗಿರುತ್ತದೆ ಹಾಗೂ ಚಿಕ್ಕಬಳ್ಳಾಪುರ-ಮೂಡಿಗೆರೆ ರಸ್ತೆಯು ಎಸ್.ಹೆಚ್. 58 ಆಗಿರುತ್ತದೆ. ಈ ಎರಡು

ರಸ್ತೆಗಳೂ ಮೂರು ವರ್ಷ ನಿರ್ವಹಣಾ ಯೋಜನೆಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡು, ವಾಹನ ಸಂಚಾರ ಸುಗಮವಾಗಿಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಆ) ಈ ರಾಜ್ಯ ಹೆದ್ದಾರಿಗಳಲ್ಲಿ ಭೂಮಿಯ ಭಾರ ಹೊರುವ ಸಾಮರ್ಥ್ಯಕ್ಕೆ ಸೂಕ್ತವಾದಷ್ಟು ದಪ್ಪವನ್ನು ಹೊಂದಿದ ರಸ್ತೆಗಳ ಉದ್ದಗಳನ್ನು ಮಾತ್ರ ಮರು ಡಾಂಬರೀಕರಣ ಮಾಡಲಾಗಿದೆ. ಇನ್ನುಳಿದ ಉದ್ದಗಳನ್ನು ಕೇವಲ ಗುಂಡಿ ತುಂಬಿ ವಾಹನ ಸಂಚಾರಕ್ಕೆ ಸುಗಮವಾಗಿ ಇಡಲಾಗಿದೆ. ಇಂತಹ ಭಾಗಗಳನ್ನು ಬಲಪಡಿಸಲು ಸುಮಾರು 5.00 ಕೋಟಿ ಬೇಕಾಗಬಹುದು. ಈ ಕೆಲಸವನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಸದ್ಯ ಇರುವುದಿಲ್ಲ.

ಬೈಪಾಸ್ ರಸ್ತೆಗಳ ಕಾಮಗಾರಿ

97 (165) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಬರುವ 2ನೇ ಹಂತದ ಬೈಪಾಸ್ ರಸ್ತೆಗಳ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರದ ಯೋಜನೆಯು ಜಾರಿಯಲ್ಲಿದೆಯೇ;

ಆ) ಹಾಗಿದ್ದರೆ, ಯಾವ ಯಾವ ಸ್ಥಳಗಳಲ್ಲಿ ಬೈಪಾಸ್ ರಸ್ತೆಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು;

ಇ) ಇದಕ್ಕೆ ತಗಲುವ ವೆಚ್ಚವೆಷ್ಟು; ಯಾವ ವರ್ಷದಲ್ಲಿ ಕಾಮಗಾರಿಯನ್ನು ಪೂರೈಸಿ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದ 175 ತಾಲ್ಲೂಕು ಮುಖ್ಯ ಪಟ್ಟಣಗಳ ಜನಸಂಖ್ಯೆಯಾದಿಯಲ್ಲಿ ಗೌರಿಬಿದನೂರು 30350 ಜನಸಂಖ್ಯೆ ಹೊಂದಿದ್ದು 100ನೆಯ ಸ್ಥಾನದಲ್ಲಿದೆ. ಇದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿದ 99 ನಗರಗಳಿಲ್ಲವಕ್ಕೂ ಇನ್ನು ಹೊರವಲಯ ರಸ್ತೆ, ವರ್ತುಲ ರಸ್ತೆಗಳನ್ನು ನಿರ್ಮಿಸಲು ಸರಕಾರಕ್ಕೆ ಸಾಧ್ಯವಾಗಿರುವುದಿಲ್ಲ. (ಇವುಗಳಲ್ಲಿ 25 ನಗರಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದೆ) ಆದರೂ ಈಗಾಗಲೇ ಗೌರಿಬಿದನೂರಿಗೆ ಭಾಗಶಃ ಹೊರವಲಯ ರಸ್ತೆ ನಿರ್ಮಿಸಿದೆ. ಈ ಹಿನ್ನೆಲೆಯಲ್ಲಿ ಗೌರಿಬಿದನೂರು ಪಟ್ಟಣಕ್ಕೆ 2ನೇ ಹಂತದ ಬೈಪಾಸ್ ರಸ್ತೆ ನಿರ್ಮಾಣವನ್ನು ಸರಕಾರವು ಸದ್ಯ ಯೋಜಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಕಾಲದಲ್ಲಿ ಭೂಮಿಯ ದಾವೆಗಳ ಪೂರೈಕೆ

98 (170) ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಾದ್ಯಂತ ಕಳೆದ ಮೂರು ವರ್ಷಗಳಿಂದಲೂ ಭೂಮಿಯ ಸ್ವಾಧೀನಾನುಭವದ ದಾವೆಗಳನ್ನು ಪೂರೈಸುವ ರೈತಾಪಿ ವರ್ಗದವರ ಸಂಖ್ಯೆ ಎಷ್ಟು? ವಿವರ ಒದಗಿಸುವುದು.